# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಸ.ಕಾ.ನಿ.ಅ/ಕಾ.ಪೇ.ಉ.ವಿ/ಬೆಂ/ಪ್ರ.ದ.ಸ/
ಸಭೆಯ ನಡವಳಿ/ಸಂಖ್ಯೆ389/2020-21

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ,
ಕಾಟನ್‌ಪೇಟೆ ಉಪವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ದಿನಾಂಕ : 23/11/2020

**ವಿಷಯ:-** ದಿನಾಂಕ. 21.11.2020ರಂದು ನಡೆದ ವಾರ್ಡ್ ಸಂಖ್ಯೆ. 120ರ ಸಮಿತಿ ಸಭೆಯ ನಡವಳಿಗಳು

**ಉಲ್ಲೇಖ:-** ಆಯುಕ್ತರ ಕಛೇರಿ ಆದೇಶ ಸಂಖ್ಯೆ. ಬಿ12(5)ಪಿ.ಆರ್/35/2020/21, ದಿ.21.09.2020

1. ವಾರ್ಡ್ ಸಮಿತಿಯ ಅಧ್ಯಕ್ಷರಾದ ಶ್ರೀಮತಿ ಮುನಿಲಕ್ಷ್ಮಿ ರವರ ಅಧ್ಯಕ್ಷತೆಯಲ್ಲಿ ವಾರ್ಡ್ ಕಮಿಟಿ ಸಭೆಯನ್ನು ಇತರೆ ಸದಸ್ಯರು ಮತ್ತು ಕಾರ್ಯದರ್ಶಿಯವರ ಸಮ್ಮುಖದಲ್ಲಿ ಪ್ರಾರಂಭಿಸಲಾಯಿತು.
2. ಕಾಟನ್‌ಪೇಟೆಯ ಮಿಲ್ ರಸ್ತೆ ಹಾಗೂ ಬೇಲಿ ಮಠದ ರಸ್ತೆಗಳ ಮ್ಯಾನ್ ಹೋಲ್‌ಗಳಿಗೆ ರಿಂಗ್‌ಗಳನ್ನು ಒದಗಿಸಿ ನಂತರ ಅದರ ಮೇಲ್ಭಾಗವನ್ನು ರೋಡಿನ ಎತ್ತರಕ್ಕೆ ಸಮವಾಗಿ ಪ್ಲಾಸ್ಟರಿಂಗ್ ಮಾಡಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ಸೂಚಿಸಲಾಯಿತು.
3. ವಾರ್ಡ್ ವ್ಯಾಪ್ತಿಯಲ್ಲಿ ಗೂಡ್‌ಶೆಡ್ ರಸ್ತೆಯಲ್ಲಿ ಬಿದ್ದಿರುವ ಮರದ ಕೊಂಬೆಗಳನ್ನು ತೆರವುಗೊಳಿಸಲು ಹಾಗೂ ಮಿಲ್ ಸರ್ಕಲ್‌ನಲ್ಲಿರುವ ಸಹ ಕಂದಾಯ ಅಧಿಕಾರಿಯವರ ವಾರ್ಡ್ ಕಛೇರಿಯಲ್ಲಿ ಕಾಂಪೌಂಡ್ ಗೋಡೆಗೆ ಮರ ಅಡ್ಡವಾಗಿದ್ದು ಅದು ಬೀಳುವ ಸಂಭವವಿದ್ದು, ಕೂಡಲೇ ಅರಣ್ಯಾಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಪತ್ರವನ್ನು ಬರೆದು ಸೂಚಿಸಲಾಯಿತು.
4. ಕಾಟನ್‌ಪೇಟೆಯ ಮಿಲ್ ರಸ್ತೆ ಹಾಗೂ ಬೇಲಿ ಮಠದ ರಸ್ತೆಗಳಲ್ಲಿನ ಗುಂಡಿಗಳನ್ನು ಕಾಂಕ್ರಿಟ್‌ನಿಂದ ಮುಚ್ಚಿಸಲು ಸೂಚಿಸಲಾಯಿತು.
5. ಕಾಟನ್‌ಪೇಟೆಯ ಮಿಲ್ ರಸ್ತೆಯಲ್ಲಿ ರಸ್ತೆ ಬದಿಯಲ್ಲಿರುವಂತಹ ಡೆಬ್ರಿಸ್‌ಗಳನ್ನು ಶೀಘ್ರವೇ ವಿಲೇವಾರಿ ಮಾಡುವಂತೆ ಸೂಚಿಸಲಾಯಿತು.
6. ಗೂಡ್‌ಶೆಡ್ ರೋಡ್‌ನ ರೈಲ್ವೆ ಕಾಂಪೌಂಡ್ ಗೋಡೆ ಬದಿಯಲ್ಲಿರುವ ಕಸವನ್ನು ಶೀಘ್ರವೇ ವಿಲೇವಾರಿ ಮಾಡಲು ಹಾಗೂ ಸೊಳ್ಳೆಗಳು ಹೆಚ್ಚಾಗುತ್ತಿರುವ ಕಾರಣ ವಾರ್ಡ್‌ನ ವ್ಯಾಪ್ತಿಯಲ್ಲಿ ಸಮರ್ಪಕವಾಗಿ ಔಷಧಿ ಸಿಂಪಡಣೆ ಕಾರ್ಯಗಳನ್ನು ಕೈಗೊಳ್ಳುವ ಬಗ್ಗೆ ಆರೋಗ್ಯಾಧಿಕಾರಿಗಳಿಗೆ ಸೂಚಿಸಲಾಯಿತು.
7. ವಾರ್ಡಿನ ಗೂಡ್‌ಶೆಡ್ ರಸ್ತೆ ಹಾಗೂ ಮಿಲ್ ರಸ್ತೆಯಲ್ಲಿ ಖಾಲಿ ಪ್ರದೇಶಗಳಲ್ಲಿ ಜನರು ಕಸವನ್ನು ಎಸೆಯುವುದರಿಂದ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗುತ್ತಿರುತ್ತದೆ. ಆದ್ದರಿಂದ ಕಸವನ್ನು ಹಾಕದಂತೆ ನೋಡಿಕೊಳ್ಳಲು ಹಾಗೂ ಕಸವನ್ನು ಹಾಕಿದ್ದಲ್ಲಿ ದಂಡ ವಿಧಿಸಲು ವಾರ್ಡಿನ ಮಾರ್ಷಲ್‌ಗಳಿಗೆ ಸೂಚಿಸಲಾಯಿತು.

Scanned with CamScanner

8. ಎಸ್.ಎಂ. ಲೇನ್, ಸುಲ್ತಾನ್‌ಪೇಟೆ ಮೈನ್ ರೋಡ್, ಬಳೇಪೇಟೆ ಮೈನ್ ರೋಡ್‌ನಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಕಾಮಗಾರಿಯಿಂದ ರಸ್ತೆಗಳು ದುರಸ್ಥಿಗೊಂಡಿವೆ ಹಾಗಾಗಿ ದುರಸ್ಥಿಗೊಂಡ ರಸ್ತೆಗಳನ್ನು ಸರಿಪಡಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ಸೂಚಿಸಲಾಯಿತು.
9. ಮಾನ್ಯ ನೋಡಲ್ ಅಧಿಕಾರಿಯವರು ಮುಂದಿನ ಸಭೆಯಲ್ಲಿ ವಾರ್ಡಿನ ಕುಂದು ಕೊರತೆಗಳ ಬಗ್ಗೆ ಸಮಗ್ರವಾಗಿ ಚರ್ಚಿಸಬೇಕೆಂದು ತಿಳಿಸುತ್ತಾ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

**ನಿರ್ಣಯ:-**

ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಸದರಿ ವಾರ್ಡ್‌ನ ಎಲ್ಲಾ ಕುಂದುಕೊರತೆಗಳನ್ನು ಮುಂದಿನ ಸಭೆಯೊಳಗಾಗಿ ಶೀಘ್ರವಾಗಿ ಪರಿಹರಿಸಲು ಅಗತ್ಯ ಕ್ರಮ ಕೈಗೊಳ್ಳಲು ಸಭೆಯು ತೀರ್ಮಾನಿಸಿತ್ತು.

ಕಾರ್ಯದರ್ಶಿ
ವಾರ್ಡ್ ಸಮಿತಿ, ವಾರ್ಡ್ ಸಂಖ್ಯೆ. 120
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು
ವಾರ್ಡ್ ಸಮಿತಿ, ವಾರ್ಡ್ ಸಂಖ್ಯೆ. 120
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು:**
1. ಮಾನ್ಯ ಜಂಟಿ ಆಯುಕ್ತರು (ಪಶ್ಚಿಮ) ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಸಲ್ಲಿಸಿದೆ.
2. ಮುಖ್ಯ ಅಭಿಯಂತರರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಸಲ್ಲಿಸಿದೆ.
3. ಕಾರ್ಯಪಾಲಕ ಅಭಿಯಂತರರು, ಗಾಂಧಿನಗರ ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕಾಟನ್‌ಪೇಟೆ ಉಪವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
5. ಕಛೇರಿ ಕಡತಕ್ಕೆ.

Scanned with CamScanner